**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 101/2019** **CW-3** **PW-3**

**ಸಾಕ್ಷಿಯನ್ನು ದಿಃ 05.06.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಹೆಸರುಃ | ಶೇಶಾದ್ರಿ |
| ತಂದೆಯ ಹೆಸರುಃ | ಶಂಕರಪ್ಪ |
| ವಯಸ್ಸುಃ | 27 |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಗಂಡಸಿ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1,2, 4 ರಿಂದ 9 ಗೊತ್ತು. ಆರೋಪಿ ಗೊತ್ತು. 10 ವರ್ಷಗಳ ಹಿಂದೆ ಚಾಸಾ-1 ಮತ್ತು 1 ನೇ ಆರೋಪಿಯ ವಿವಾಹ ಹೇಮವತಿ ಕಲ್ಯಣ ಮಂಟಪದಲ್ಲಿ ಆಗಿರುತ್ತದೆ. ಮದುವೆಯಾದ 1 ವರ್ಷಗಳ ಕಾಲ ಇಬ್ಬರು ಚೆನ್ನಾಗಿ ಇದ್ದು, ಆನಂತರ 1 ನೇ ಆರೋಪಿಯು ಚಾಸಾ-1 ರವರಿಗೆ ಕಿರುಕುಳ ನೀಡಲು ಆರಂಭಿಸಿದರು. ಆ ನಂತರ ನಾನು, ಚಾಸಾ-1 ರವರ ತಂದೆತಾಯಿ, ಚಾಸಾ-7 ರವರು ಆರೋಪಿಯ ಮನೆಗೆ ಹೋಗಿ ಜಗಳ ಮಾಡಿಕೊಳ್ಳಬೇಡಿ ಎಂದು ಬುದ್ದಿವಾದ ಹೇಳಿರುತ್ತೇವೆ. ಆದರೂ ಸಹ 1 ನೇ ಆರೋಪಿಯು ಕಿರುಕುಳ ನೀಡುತ್ತಿದ್ದರು. ಚಾಸಾ-1 ರವರ ತಂದೆ ತಾಯಿಗೆ ಗಂಡು ಸಂತಾನ ಇಲ್ಲದೇ ಇರುವ ಕಾರಣ 1 ನೇ ಆರೋಯು ಹೆಚ್ಚಿನ ವರದಕ್ಷಿಣೆ ತರುವಂತೆ ಚಾಸಾ-1 ರವರಿಗೆ ತೊಂದರೆ ಕೊಡುತ್ತಿದ್ದರು. ಹಾಗೆಯೇ 1 ನೇ ಆರೋಪಿಯು ಚಾಸಾ-1 ರವರು ಎಣ್ಣೆಯಿಂದ ಸುಟ್ಟಿರುತ್ತಾರೆ. ಆ ನಂತರ ಚಾಸಾ-1 ರವರ ಅಣ್ಣನ ಅಪಘಾತದ ಪರಿಹಾರದ ಹಣವಾದ 3. ಲಕ್ಷದ 50 ಸಾವಿರ ಹಣವನ್ನು ಚಾಸಾ-1 ರವರ ಮನೆಯವರು 1 ನೇ ಆರೋಪಿಗೆ ವರದಕ್ಷಿಣೆಯಾಗಿ ನೀಡಿರುತ್ತಾರೆ. ಆದರೂ ಸಹ 1 ನೇ ಆರೋಪಿಯು ಚಾಸಾ-1 ರವರಿಗೆ

ನಿಮ್ಮ ಎಲ್ಲಾ ಆಸ್ತಿಯನ್ನು ಬರೆಸಿಕೊಂಡು ಬರುವಂತೆ ತೊಂದರೆ ನೀಡುತ್ತಿದ್ದರು. ಇಲ್ಲದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಅವರ ಹಿಂಸೆ ತಾಳಲಾರದೆ ಚಾಸಾ-1 ರವರು ತನ್ನ ತಂದೆಯ ಮನೆಗೆ ವಾಪಾಸ್ಸು ಬಂದಿರುತ್ತಾರೆ. ಸದರಿ ವಿಚಾರವನ್ನು ನಮಗೆ ತಿಳಿಸಿದಾಗ ನಾನು ಕಾನೂನು ಮುಖಾಂತರ ಪರಿಹರಿಸಿಕೊಳ್ಳಿ ಎಂದು ತಿಳಿಸಿದ್ದೆ. ಸದರಿ ವಿಚಾರವನ್ನು ನಾನು ಪೋಲಿಸ್ ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಮದುವೆ ಮಾತುಕತೆಗೆ ನಾನು, ಚಾಸಾ-4 ರಿಂದ 7 ರವರು ಸೇರಿಕೊಂಡೆವು ಎಂದರೆ ಸರಿ. ಸದರಿ ಮಾತುಕೆತೆಯಲ್ಲಿ 1 ನೇ ಆರೋಪಿಗೆ 150 ಗ್ರಾಂ ಚಿನ್ನ ಮತ್ತು 2 ಲಕ್ಷ ಹಣವನ್ನು ವರದಕ್ಷಿಣೆಯಾಗಿ ನೀಡಲು ತೀರ್ಮಾನವಾಯಿತು ಎಂದರೆ ಸರಿ. ಸದರಿ ಮಾತುಕತೆಯಂತೆ ಮದುವೆಯ ದಿನ ಹಣ ಹಾಗೂ ಚಿನ್ನದ ಒಡೆಯನ್ನು 1 ನೇ ಆರೋಪಿಗೆ ನೀಡಿರುತ್ತೇವೆ ಎಂದರೆ ಸರಿ. ಮದುವೆಯಾದ 1 ವರ್ಷದ ನಂತರ 1 ನೇ ಆರೋಯು 2 ರಿಂದ 5 ನೇ ಆರೋಪಿಗಳ ಮಾತು ಕೇಳಿ ಚಾಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆ ತರುವಂತೆ ಕಿರುಕುಳ ನೀಡುತ್ತಿದ್ದರು ಎಂದರೆ ಸರಿ. ಈ ವಿಚಾರವಾಗಿ ನಾನು ಮತ್ತು ಚಾಸಾ-6 ರಿಂದ 8 ರವರು ಹಲವಾರು ಬಾರಿ ಆರೋಪಿಯ ಮನೆಯಲ್ಲಿ ಹೋಗಿ ಪಂಚಾಯಿತಿ ಮಾಡಿರುತ್ತೇವೆ ಎಂದರೆ ಸರಿ. ಹೆಚ್ಚಿನ ವರದಕ್ಷಿಣೆಯಾಗಿ 3 ಲಕ್ಷದ 50 ಸಾವಿರ ನೀಡಿದ 7 ತಿಂಗಳ ನಂತರ ಮತ್ತೆ ತೊಂದರೆ ನೀಡಲು ಪ್ರಾರಂಭಿಸಿದಾಗ ಚಾಸಾ-1 ರವರು ತವರು ಮನೆಗೆ ಬಂದು ನನ್ನನ್ನು ಕರೆದರು ಎಂದರೆ ಸರಿ. ಚಾಸಾ-1 ರವರು ನನಗೆ ನನ್ನ ಗಂಡನ ಮನೆಯವರು ನಿಮ್ಮ ತಂದೆಗೆ ಗಂಡು ಮಕ್ಕಳು ಇಲ್ಲದ ಕಾರಣ ಹೆಚ್ಚಿನ ಆಸ್ತಿಯನ್ನು ನನ್ನ ಹೆಸರಿಗೆ ಬರೆಸಿಕೊಂಡು ಬಾ

ಎಂದು ಕಿರುಕುಳ ನೀಡಿದ್ದಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಆಸ್ತಿ ಬರೆಸಿಕೊಂಡು ಬರಲಿಲ್ಲವಾದರೆ ಸೀಮೆ ಎಣ್ಣೆ ಹಾಕಿ ಸುಡುತ್ತಿದ್ದರು ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ಚಾಸಾ-1 ರವರು ಅದನ್ನು ನಿರಕಾರಿಸಿದಾಗ ಆರೋಪಿಗಳು ನಮ್ಮ ಊರಿನ ಮಂಜಣ್ಣನ ಹೆಂಡತಿಯನ್ನು ಸಯಿಸದ ಹಾಗೆ ಚಾಸಾ-1 ರವರನ್ನು ಸಾಯುಸುವುದಾಗಿ ಮಾತನಾಡಿಕೊಳುತ್ತಿದ್ದ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ಆ ಕಾರಣ ನಾನು ಭಯ ಪಟ್ಟು ನನ್ನ ತವರು ಮನಗೆ ಬಂದಿರುತ್ತೇನೆ ಎಂದು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆ ನಂತರ ನಾವೆಲ್ಲರೂ ಆರೋಪಿಯ ಮನೆಯವರನ್ನು ಮಾತನಾಡಿಸಿ ಚಾಸಾ-1 ಮನಗೆ ಸೇರಿಸಿಕೊಡುವಂತೆ ಹೇಳಿದರು ಆರೋಪಿಗಳು ವರದಕ್ಷಿಣೆ ತರದೇ ಇದ್ದರು ಚಾಸಾ-1 ರವರನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ ಎಂದರೆ ಸರಿ. ಆ ಸಂಬಂಧ ಚಾಸಾ-1 ರವರು ಆರುಾಪಿಯ ವಿರುದ್ದ ದೂರು ನೀಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಜೆ.ಡಿವಕೀಲರಿಂದಃ</u>**

ನಮ್ಮ ಊರಿಗೂ ಮತ್ತು ಗುಂಡ ಶೆಟ್ಟಿಹಳ್ಳಿಗೂ 45 ಕಿಮಿ ಆಗುತ್ತದೆ. ನಮ್ಮ ಮನೆಯವರು ಚನ್ನರಾಯಪಟ್ಟಣದಲ್ಲಿ ವಾಸವಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ಆಲದಹಳ್ಳಿಯಲ್ಲಿ ಮದುವೆ ಮಾತುಕತೆ ಆಗಿರುತ್ತದೆ ದಿನಾಂಕ ಗೊತ್ತಿಲ್ಲ. ಚಾಸಾ-4 ರಿಂದ 7 ಎಲ್ಲ ನನ್ನ ಸಂಬಂಧಿಕರು ಎಂದರೆ ಸರಿ. 5 ನೇ ಆರೋಪಿಯು ಸಹ ಇತರೆ ಆರೋಪಿ ಜೊತೆ ಇದ್ದಾರೆ . 5 ನೇ ಆರೋಪಿ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಮದುವೆಯ ಸಮಯದಲ್ಲಿ ಆರೋಪಿಗಳು ವರದಕ್ಷಿಣೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಹೆಸರು ಶೃತಿ. ಚಾಸಾ-1 ನನ್ನ ಹೆಂಡತಿಯ ತಂಗಿ ಎಂದರೆ ಸರಿ. ಚಾಸಾ-1 ರವರ ಮದುವೆ ನಮ್ಮ ಮದುವೆಗಿಂತ ಮುಂಚೆ ಆಗಿರುತ್ತದೆ. ಚಾಸಾ-1 ರವರ ತಂಗಿಯನ್ನು ನಾನು ಮದುವೆಯಾಗದೇ ಇರುವ ಕಾರಣ ನಾನು ಯಾವುದೇ ಮಾತುಕತೆಗೆ ಸೇರಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಸಂಬಂಧಿಕನೇ ಆಗಿರದೇ ಇರುವ ಕಾರಣ ನನಗೆ ಮದುವೆ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮದುವೆಯ ಮುಂಚೆ ನಾನು ಅವರ ಸಂಬಂಧಿಕ ಎಂದು ನಾನು ಪೋಲೀಸ್ ರವರು ಮುಂದೆ ಹೇಳಿದ್ದೇನೆ. ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ದಿನಾಂಕ ಗೊತ್ತಿಲ್ಲ. ನಾನು ಹೇಳಿಕೆ ನೀಡಿರುವುದಿಲ್ಲ.

ಚಾಸಾ-1 ಮತ್ತು 1 ನೇ ಆರೋಪಿಯು ತಂದೆ-ತಾಯಿ ಸಹೋದರನ್ನು ಬಿಟ್ಟು ಬೇರೆ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಅವರು ಬೇರೆಯಾಗಿ ವಾಸವಿದ್ದರು ಸಹ ಇತರೆ

ಆರೋಪಿಯಿನ್ನು ಪ್ರಕರಣದಲ್ಲಿ ಸೇರಿಸಲು ಒಟ್ಟಿಗೆ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿಗಳು ಬೆಂಗಳೂರಿನಲ್ಲಿ ತೆಂಗಿನ ಕಾಯಿ ವ್ಯಾಪಾರ ಮಾಡಿಕೊಂಡು ವಾಸವಿದ್ದಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಒಂದು ವಾಹನ ಇತ್ತು ಎಂದರೆ ಸರಿ. 1 ನೇ ಆರೋಪಿಯು ಚಾಸಾ–1 ರವರಿಗೆ ವರದಕ್ಷಿಣೆ ಬಗ್ಗೆ ಕಿರುಕುಳ ನೀಡಿದ ಬಗ್ಗೆ ದಿನಾಂಕ ಗೊತ್ತಿಲ್ಲ. ನಾನು ಆರೋಪಿಗಳು ಕಿರುಕುಳ ನೀಡಿರುವುದನ್ನು ಪ್ರತ್ಯೇಕ್ಷವಾಗಿ ನೋಡಿರುವುದಿಲ್ಲ. ಚಸಾ–1 ರವರ ತಂದೆ ತಾಯಿ 3 ಲಕ್ಷದ 50 ಸಾವಿರ ಹಣವನ್ನು 1 ನೇ ಆರೋಪಿಗೆ ನೀಡಿರುತ್ತಾರೆ. ಆ ಬಗ್ಗೆ ದಾಖಲಾತಿಗಳು ಇಲ್ಲ. ಹೆಚ್ಚಿನ ವರದಕ್ಷಿಣೆ ಹಾಗೂ ಆಸ್ತಿ ಬರೆಸಿಕೊಂಡು ಬಾ ಎಂದು ಆರೋಪಿಗಳು ಚಸಾ–1 ರವರಿಗೆ ಕಿರುಕುಳ ನೀಡಿರುತ್ತಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ಯಾವ ದಿನಾಂಕದಂದು ಮನೆ ಬಿಟ್ಟು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ–1 ರವರು ಯಾವಾ ದೂರು ನೀಡಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸಹ ನಾನು ಚಾಸಾ–1 ರವರ ಸಂಬಂಧಿಕ ಎಂದು ಹೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**